ಈ ಕೋಣ ನಿಮ್ಮೂರದ್ದೆ ಅನ್ನುವುದು ಹೆಂಗೆ? ಯೋಚನೆಮಾಡಿ ಬನ್ರಿ. ನಾವು ಊರವರು ಸೇರಿ ನಿಜ ತಿಳಿತೇವಿ. ಬರುವ ಸೋಮವಾರ ಸಂಜೆ ಇದೇ ಬಸವಣ್ಣನ ಗುಡಿಯಲ್ಲಿ ಸೇರೋಣ" ಎಂದರು ಮಾರಳ್ಳಿ ಯಜಮಾನರು. ಆಯಿತೆಂದು ಕೊನೆಗೆ ಹಾರವಳ್ಳಿಯವರು ಒಪ್ಪಿಹೋದರು.

★★★

"ಕೊಂಬು ಕಾಲು ಚಹರೆಗಳ ನೋಡಿದರೆ ಈ ಕೋಣ ನನ್ನ ತವರೂರಿನದು ಇದ್ದಂಗಿದೆ. ಇದು ಇಲ್ಲಿಗೆ ಹೆಂಗೆ ಬಂತು? ಆರು ತಿಂಗಳಿಂದ ಕೋಣಕಾಣದೆ ಆಳಿಟ್ಟು ಹುಡುಕುಸ್ತವರೆ ಊರವರು ಅಂತ ಕೇಳಿದ್ದೆ. ಇದೇ ಆಗಿದ್ದರೆ ಅಲ್ಲೆಲ್ಲೋ ಹುಡುಕಿದರೆ ಏನುಬಂತು?" ಎಂದು ಬೆನ್ನೂರಿನಲ್ಲಿರುವ ಅಣ್ಣನಿಗೆ ತಂಗಿಯೊಬ್ಬಳು ಫೋನುಹಚ್ಚಿ ಅಂದಳು.

ಭಾನುವಾರ ಸಂಜೆ ಊರಿಗೆ ಊರೆ ಮಂದೆಗಟ್ಟಿ ಬಂದಂಗೆ ನಲವತ್ತು ಐವತ್ತು ಜನರ ಗುಂಪು ಬಂತು ಬೆನ್ನೂರಿಂದ ಮಾರಳ್ಳಿಗೆ.

"ಇದು ನಮ್ಮೂರ ಕ್ವಾಣವೆ ಸರಿ. ಮಾರಿಗೆ ಬಿಟ್ಟು ನಾಕುವರೆ ವರ್ಷಗಳೇ ಆದವು. ಹಬ್ಬಕ್ಕೆ ಅಣಿ ಆಗ್ತಾ ಇದ್ದೇವೆ. ಈ ಕೋಣನ ಹುಡುಕಿ ಹುಡುಕಿ ಸಾಕಾಗಿ ಹೋಗಿತ್ತು. ಎರಡು ಆಳುಗಳು ಅಟ್ಟಿ ಪತ್ತೆಮಾಡಲು ನೋಡಿದಿವಿ. ಸಿಗದೆ ಹೋಗಿತ್ತು. ಈಗ ಈ ಊರು ಮಾರಳ್ಳಿ ಸೇರಿದೆ. ಇಲ್ಲಿ ಮಜಬೂತಾದ ಬೆಳೆ, ಅತ್ತ ರುಚಿಯ ಹೊಳೆ ನೀರಿದೆ. ಇಲ್ಲೇ ತಿಂದು ಇಲ್ಲೇ ಮೇದು, ಹಳ್ಳದ ನೀರು ಕುಡಿದು ಎತ್ತೂ ಹೋಗದೆ ಇಲ್ಲೇ ಉಳಿದಿದೆ" ಅಂದ ಬೆನ್ನೂರ ಹಿರಿಯ.

ಮಾಗಿದ ಅತ್ತಿಹಣ್ಣು ಮರದಿಂದ ತಪತಪ ಸುರಿದಂಗೆ, ಬೆನ್ನೂರು ಮಾರಳ್ಳಿ ಹುಡುಗರ ಹಿರಿಯರ ಮಧ್ಯೆ ಮಾತು ಮಾತಿನ ನುಡಿಯಾಟವೇ ನಡೆಯಿತು.

"ನಮ್ಮೂರ ಕ್ವಾಣ ಕೊಡಾಕೆ ನಿಮ್ಮದೇನು ಕೊಸರಾಟ?"

"ಪೆಟ್ಟು ನೋವು ಅನುಭವಿಸೋರು ನಾವು."

"ಅದು ನಿಮ್ಮ ಹಣೆಬರಹ."

"ಎರಡೂ ಕಾಲಿಗೆ ಕೋಳ ಹಾಕಿ, ನಿಮ್ಮೂರ ಕೋಣವ ನಿಮ್ಮೂರಲ್ಲಿ ಕಟ್ಟಿಹಾಕೊಳ್ಳಿ."

ಮೂಗಿಗೊಂದು ಮಾತು, ಕಣ್ಣಿಗೆರಡು ನುಡಿ, ನಾಲಗೆ ಒಂದಾದರೂ ಹಲವು ನುಡಿ ಹರಿದಾಡಿದವು. ಹಟ್ಟಿಯ ಅವ್ವನ ಒಕ್ಕಲಿನವರು – 'ಏನೇ ಆದರೂ ಹಬ್ಬ ನಿಲ್ಲೋದು ಬ್ಯಾಡ' ಅಂದುಕೊಂಡರು.

"ಬೆನ್ನೂರವರೆ, ನಮ್ಮೂರ ಕ್ವಾಣ ಇದು ಅಂತ ಹಾರುವಳ್ಳಿಯವರು ಬಂದು ಕೇಳಿದರು, ಈಗ ನೀವೂ ಬಂದಿದ್ದೀರಿ. ನಿಮ್ಮೂರಿನದೇ ಈ ಕ್ವಾಣ ಅಂತ ಹೇಳುತಿದ್ದೀರಿ. ಹೆಂಗೆ ಏನು? ಗುರುತು ಪತ್ತೆ ಹೆಂಗೆ? ನಮ್ಮೂರವರನ್ನ ನಿಷ್ಠುರ ಮಾಡಬೇಡಿರಿ. ನಮಿಗೆ ಈ ಕೋಣ ಅಲ್ಲ ಯಾವ ಮಾರಿಕೋಣನು ಬ್ಯಾಡ. ಅಕ್ಕಪಕ್ಕದ ಊರವರು ಕಂಡವರು ಬಂದು ಹೇಳಲಿ" ಅಂತ ಕೊನೆಮಾತು ಕೊಟ್ಟರು.

"ಹಾಗೆ ಆಗಲಿ. ಹಾಗೆ ಗೊತ್ತಿರುವವರು ಇತರ ಎಲ್ಲರೊಂದಿಗೆ ಮತ್ತೆ ಬರುತೇವಿ" ಅಂದು ಹೋದರು.

★★★

ಮೂಗುದಾರ ಹಗ್ಗ ಕೊರಳ ದಂಡೆಗಳು ಒಂದೂ ಇರದ ಕೋಣ, ಹಾಳುಮನೆಯಲಿ ಕೂಡಿಹಾಕಿಸಿಕೊಂಡು, ತಲೆಚಿಟ್ಟು ಹಿಡಿದು ಗರಗರ ಒಳಗೆ ಸುತ್ತಿತು, ಗೋಡೆ ಗೋಡೆ ಕೆರೆದು ಗುದ್ದಿತು. ಇದರ ಗದ್ದಲ ಗಲಾಟೆಗೆ ಅಕ್ಕಪಕ್ಕದ ಮನೆಯವರು ರೋಸಿ ಹೋಗಿದ್ದರು. ಆದರೆ, ಅದೊಂದು ಬೆಳ್ಳಂ ಬೆಳಗ್ಗೆ ಮಸಕು ಮುಂಜಾವದಲಿ ದಿಮ್ಮಿ ಅಡ್ಡಮರಗಳ ತಳ್ಳಿ ಎದ್ದೋಡಿತು. ತಣ್ಣಗೆ ನೆಮ್ಮದೀಲಿ ಅಂಗಳದಲಿ ಕಾಲು ಚಾಚಿ ಹಾಯಾಗಿ ಮಲಗಿದ್ದ ನಾಯಿಯ ಕಾಲ ತುಳಿದೋಡಿತು. ಅದರ ತುಳಿತಕ್ಕೆ